

ICC
MEN'S T20
WORLD CUP
WEST INDIES & USA 2024

ವಿಶ್ವ ಚುಟುಕು ಕ್ರಿಕೆಟ್‌ಗೆ ಯಾರು ಹೊಸ ದೊರೆ?

‘ಇಂಡಿಯನ್ ಪ್ರೀಮಿಯರ್ ಲೀಗ್’ (ಐಪಿಎಲ್) ಹಂಗಾಮ ಮುಗಿಯುತ್ತಿದ್ದಂತೆಯೇ ಕ್ರಿಕೆಟ್ ಪ್ರೇಮಿಗಳ ನಡುವೆ ಕೇಳಿ ಬರುತ್ತಿರುವ ಪ್ರಶ್ನೆ. ಸಂಪೂರ್ಣ ಎರಡು ತಿಂಗಳು ‘ಮಿಲಿಯನ್ ಡಾಲರ್ ಬೇಬಿ’ ಐಪಿಎಲ್ ಸಂಭ್ರಮದ ಏಳುಬೀಳುಗಳ ಕ್ಷಣಗಳಿಗೆ ಸಾಕ್ಷಿಯಾಗಿದ್ದ ಕ್ರೀಡಾಭಿಮಾನಿಗಳಿಗೆ, ಇನ್ನು ಮುಂದಿನ ಒಂದು ತಿಂಗಳು ಕೂಡ ಕ್ರಿಕೆಟ್ ಹಬ್ಬದ ಸಡಗರವೇ.

ಫ್ರಾಂಚೈಸ್‌ಗಳ ಆಧಾರಿತ ಐಪಿಎಲ್‌ನಲ್ಲಿ ಕೊನೆಯ ಎಸೆತದಲ್ಲಿ ಸಿಕ್ಸರ್ ಬಾರಿಸಿ ಗೆಲುವು ತಂದುಕೊಟ್ಟ ಬ್ಯಾಟ್ಸ್‌ಮನ್, ಕೊನೆಯ ವಿಕೆಟ್ ಉರುಳಿಸಿ ಹೀರೊ ಆದ ಬೌಲರ್, ಅಸಾಧ್ಯ ಎನ್ನುವಂಥ ಚೆಂಡು ಗಾಳಿಯಲ್ಲಿ ಹಾರಿ ಹಿಡಿದು ಶ್ರೇಷ್ಠ ಫೀಲ್ಡರ್ ಎನಿಸಿಕೊಂಡ ಆಟಗಾರ, ಬೌಂಡರಿ ಹಾಗೂ ಸಿಕ್ಸರ್‌ಗಳ ಭರಾಟೆ, ಚಿಯರ್ ಹುಡುಗಿಯರ ನರ್ತನ, ಸೋತಾಗಿನ ಬೇಸರ ಹಾಗೂ ಗೆದ್ದಾಗಿನ ಸಂಭ್ರಮ – ಈ ಎಲ್ಲ ಕ್ಷಣಗಳಿಗೂ ‘ಟಿ–20’ ಮಾದರಿಯ ಕ್ರಿಕೆಟ್ ಸಾಕ್ಷಿಯಾಗಿದೆ. ಜನ ಇನ್ನೂ ಐಪಿಎಲ್ ಗುಂಗಿನಲ್ಲಿಯೇ ಇದ್ದಾರೆ. ಇದರ ನಡುವೆಯೇ ಈಗ ಟಿ–20 ಅಂತರರಾಷ್ಟ್ರೀಯ ವಿಶ್ವಕಪ್ ಕ್ರಿಕೆಟ್ ಟೂರ್ನಿ ಆರಂಭವಾಗಲಿದೆ.

ಜೂನ್ 1ರಿಂದ ಅಮೆರಿಕ ಮತ್ತು ವೆಸ್ಟ್ ಇಂಡೀಸ್ ಆತಿಥ್ಯದಲ್ಲಿ ನಿಗದಿಯಾಗಿರುವ ‘ವಿಶ್ವ ಹಣಾಹಣಿ’ ಜೂ. 29ರ ತನಕ ಜರುಗಲಿದೆ. ಐಪಿಎಲ್‌ನಲ್ಲಿ ವಿವಿಧ ತಂಡಗಳಲ್ಲಿ ಗಮನಾರ್ಹ ಪ್ರದರ್ಶನ ತೋರಿರುವ ಆಟಗಾರರ ಭಾರತೀಯ ತಂಡ ವಿಶ್ವಕಪ್‌ನಲ್ಲಿ ಗೆಲ್ಲುವ ನೆಚ್ಚಿನ ಪಡೆಗಳಲ್ಲೊಂದು ಎನ್ನುವುದರಲ್ಲಿ ಅನುಮಾನವೇನಿಲ್ಲ. ಅದರಲ್ಲಿಯೂ ಈ ಬಾರಿ ಅನುಭವಿ ಮತ್ತು ಹೊಸ ಆಟಗಾರರ ಮಿಶ್ರಣದ ತಂಡ ಹೊಸ ನಿರೀಕ್ಷೆ, ಕನಸುಗಳೊಂದಿಗೆ ಟ್ರೋಫಿ ಗೆಲ್ಲುವ ಭರವಸೆ ಮೂಡಿಸಿದೆ. ಚುಟುಕು ಕ್ರಿಕೆಟ್ ವಿಶ್ವಕಪ್‌ನಲ್ಲಿ ಎಂಟು ಟೂರ್ನಿಗಳಿಂದ ಅನುಭವಿಸಿರುವ




ಜಸ್‌ಪ್ರೀತ್ ಬೂಮ್ರಾ: ಭಾರತದ ಬೌಲಿಂಗ್ ಬತ್ತಳಿಕೆಯಲ್ಲಿನ ವಿಶೇಷ ಶಕ್ತಿ